# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, __________, __________ ತಾಲ್ಲೂಕು.

ಸಂಕಲನಾತ್ಮಕ ಮೌಲ್ಯಮಾಪನ–1 ಸೆಪ್ಟಂಬರ್–2023 ಅಂಕಗಳು :–40

ತರಗತಿ : 6ನೇ ವಿಷಯ : ಕನ್ನಡ ಅವಧಿ :– 90ನಿ

---

**I. ಒಂದು ಪದ/ ವಾಕ್ಯದಲ್ಲಿ ಉತ್ತರಿಸಿ:–** 3×1=3

1) ಭೂಮಿಯ ಪೋಷಕ ಯಾರು?

2) ತಾಳಿ ತಾಳಿ ಒಮ್ಮೆ ಏನಾಗಿ ಕುಟುಕುವನು?

3) ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಎಲ್ಲಿಗೆ ಸೇರಿದಳು?

**II. ಸರಿಯಾದ ಪದಗಳಿಂದ ಬಿಟ್ಟ ಸ್ಥಳ ತುಂಬಿರಿ :–** 3×1=3

4) ಕನ್ನಡ ವರ್ಣಮಾಲೆಯಲ್ಲಿ---------ಅಕ್ಷರಗಳಿವೆ.

5) ಪ್ರಸಾದರು ಅವರಿಗೆಲ್ಲ ಅಷ್ಟಷ್ಟು----------ಕೊಟ್ಟರು.

6) ಸೇವಕಿ--------- ಬುದ್ದಿಯುವಳು.

**III. ಆವರಣದಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.** 6×1=6

7) ಮಗು (ಬಹುವಚನ ರೂಪ ಬರೆಯಿರಿ)

8) ಸತ್ಕಾರ (ಈ ಪದ ಬಳಸಿ ಸ್ವಂತ ವಾಕ್ಯ ರಚಿಸಿ)

9) ಗುಡ್ಡಗಳಲ್ಲಿ ದೊಡ್ಡದೊಡ್ಡ ಕಲ್ಲುಗಳಿವೆ (ಈ ವಾಕ್ಯದಲ್ಲಿರುವ ದ್ವಿರುಕ್ತಿ ಗುರುತಿಸಿರಿ)

10) ಇಳೆ (ಸಮಾನಾರ್ಥಕ ಪದ ಬರೆಯಿರಿ)

11) ಕೂತು ಉಣ್ಣುವವನಿಗೆ _________ (ಗಾದೆ ಪೂರ್ಣಗೊಳಿಸಿ)

12) ಸರಸ್ವತಿ ಶಾಲೆಗೆ ಹೋಗುತ್ತಾಳೆ (ಈ ವಾಕ್ಯದಲ್ಲಿರುವ ಕ್ರಿಯಾಪದ ಗುರುತಿಸಿರಿ)

**IV. ಸಂದರ್ಭ ಸಹಿತ ವಿವರಿಸಿರಿ.** 2×2=4

13) ನನಗೆ ಗುರುಕುಲದ ಜೀವನ ನೆನಪಾಗುತ್ತದೆ.

14) ನಿನ್ನೆ ರಾತ್ರಿ ಕಣ್ಣು ಮುಚ್ಕೊಂಬಿಟ್ಟ

**V. ಪದ್ಯವನ್ನು ಪೂರ್ತಿ ಮಾಡಿ :–** 1×2=2

15) ಆಗಸದಲ್ಲಿ___________ತೊಂದರೆ?ಇದು ಕಷ್ಟ

**VI. ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ:–** 6×2=12

16) ರಾಜ್‌ಕುಮಾರ್‌ರವರ ವ್ಯಕ್ತಿತ್ವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

17) ಕಂಬಳಿಹುಳು ಹೇಗಿದೆ ? ವಿವರಿಸಿ

18) ರಾಜ್‌ಕುಮಾರ್ ಅವರ ಹೃದಯ ಸಂಪನ್ನತೆಗೆ ಒಂದರೆಡು ಉದಾಹರಣೆ ತಿಳಿಸಿ.

19) ಮಂಗಳ ಗ್ರಹದಲ್ಲಿ ಬರ ಏಕೆ ಬಂದಿತು? ಎಂಬುದನ್ನು ನಿಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿ

20) ರಾಣಿಯ ಸೇವಕಿ ಏನೆಂದು ಆಲೋಚನೆ ಮಾಡಿದಳು?

21) ರಾಜೇಂದ್ರ ಪ್ರಸಾದ್ ಅವರ ವ್ಯಕ್ತಿತ್ವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

**VII. ಕೊಟ್ಟಿರುವ ಕವಿಯ ಕಾಲ,ಕೃತಿ,ಸ್ಥಳ,ಮತ್ತು ಪ್ರಶಸ್ತಿಗಳ ಬಗ್ಗೆ ಬರೆಯಿರಿ.** 1×2=2

22) ಬಿ.ಆರ್ ಲಕ್ಷಣರಾವ್

**VIII. ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ:–** 2×4=8

23) ಸುಧಾಮನ ಯಾವ ಗುಣಗಳನ್ನು ಮೆಚ್ಚುವಿರಿ?ಏಕೆ?ವಿವರಿಸಿ

24) ನಿಮ್ಮ ಶಾಲೆಯಿಂದ ಪ್ರವಾಸ ಹೋಗಲು ನಿಮ್ಮ ತಂದೆಯವರಿಂದ ಹಣವನ್ನು ಕೇಳಿ ಪತ್ರ ಬರೆಯಿರಿ.

**1. ಘಟಕಾವಾರು ಅಂಕ ಹಂಚಿಕೆ** **6th 1st sem ಕನ್ನಡ** **2. ಉದ್ದೇಶವಾರು ಅಂಕ ಹಂಚಿಕೆ**

| ಕ್ರ. ಸಂ | ಘಟಕ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ದೊಡ್ಡವರ ದಾರಿ | 2 | 3 | 7.5% |
| 2 | ಗಂಧರ್ವ ಸೇನ | 3 | 5 | 12.5% |
| 3 | ಕೃಷ್ಣ–ಸುಧಾಮ | 2 | 6 | 15% |
| 4 | ಡಾ ರಾಜಕುಮಾರ್ | 2 | 4 | 10% |
| 5 | ಬೇಸಿಗೆ | 2 | 3 | 7.5% |
| 6 | ಮಂಗಳ ಗ್ರಹದಲ್ಲಿ ಪುಟ್ಟಿ | 3 | 5 | 12.5% |
| 7 | ನೀ ಹೋದ ಮರುದಿನ | 1 | 1 | 2.5% |
| 8 | ಕಂಬಳಿಹುಳು ಮತ್ತು ಚಿಟ್ಟೆ | 1 | 2 | 5% |
| 9 | ವ್ಯಾಕರಣ | 7 | 7 | 17.5% |
| 10 | ಪತ್ರಲೇಖನ | 1 | 4 | 10% |
| 11 | | | | |
| 12 | | | | |
| | | | | |
| | | | | |
| | ಒಟ್ಟು | 24 | 40 | 100% |

| ಕ್ರ. ಸಂ | ಉದ್ದೇಶಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಜ್ಞಾನ | 10 | 10 | 25% |
| 2 | ತಿಳಿವಳಿಕೆ | 8 | 14 | 35% |
| 3 | ಅಭಿವ್ಯಕ್ತಿ /ಅನ್ವಯ | 5 | 12 | 30% |
| 4 | ಪ್ರಶಂಸೆ / ಕೌಶಲ | 1 | 4 | 10% |
| | ಒಟ್ಟು | 24 | 40 | 100% |

**3. ಪ್ರಶ್ನಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ವಸ್ತುನಿಷ್ಟ ಪ್ರಶ್ನೆ | 8 | 8 | 30% |
| 2 | ಕಿರು ಉತ್ತರ ಪ್ರಶ್ನೆ | 14 | 24 | 40% |
| 3 | ದೀರ್ಘ ಉ. ಪ್ರಶ್ನೆ | 2 | 8 | 30% |
| | ಒಟ್ಟು | 24 | 40 | 100% |

**4. ಕಠಿಣತಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸುಲಭ | 12 | 12 | 25% |
| 2 | ಸಾಧಾರಣ | 10 | 20 | 35% |
| 3 | ಕಠಿಣ | 2 | 8 | 40% |
| | ಒಟ್ಟು | 24 | 40 | 100% |

# ನೀಲನಕಾಶೆ

| ಕ್ರ. ಸಂ | ಉದ್ದೇಶಗಳು ಘಟಕಗಳು | ಜ್ಞಾನ | | | ತಿಳಿವಳಿಕೆ | | | ಅಭಿವ್ಯಕ್ತಿ/ಅನ್ವಯ | | | ಪ್ರಶಂಸೆ/ಕೌಶಲ | | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ಪ್ರಶ್ನೆ | ಅಂಕ |
| 1 | ದೊಡ್ಡವರ ದಾರಿ | 1(1) | | | | | | | 1(2) | | | | | 2 | 3 |
| 2 | ಗಂಧರ್ವ ಸೇನ | 1(1) | | | | 2(2) | | | | | | | | 3 | 5 |
| 3 | ಕೃಷ್ಣ–ಸುಧಾಮ | | | | | 1(2) | | | | | | | 1(4) | 2 | 6 |
| 4 | ಡಾ ರಾಜಕುಮಾರ್ | | | | | 1(2) | | | 1(2) | | | | | 2 | 4 |
| 5 | ಬೇಸಿಗೆ | 1(1) | | | | 1(2) | | | | | | | | 2 | 3 |
| 6 | ಮಂಗಳ ಗ್ರಹದಲ್ಲಿ ಪುಟ್ಟಿ | 1(1) | | | | 1(2) | | | 1(2) | | | | | 3 | 5 |
| 7 | ನೀ ಹೋದ ಮರುದಿನ | 1(1) | | | | | | | | | | | | 1 | 1 |
| 8 | ಕಂಬಳಿಹುಳು ಮತ್ತು ಚಿಟ್ಟೆ | | | | | | | | 1(2) | | | | | 1 | 2 |
| 9 | ವ್ಯಾಕರಣ | 5(1) | | | 2(1) | | | | | | | | | 7 | 7 |
| 10 | ಪತ್ರಲೇಖನ | | | | | | | | | 1(4) | | | | 1 | 4 |
| 11 | | | | | | | | | | | | | | | |
| 12 | | | | | | | | | | | | | | | |
| | | | | | | | | | | | | | | | |
| | | 10(10) | | | 2(2) | 6(12) | | | 4(8) | 1(4) | | | 1(4) | 24 | |
| | ಒಟ್ಟು | 10(10) | | | 8(14) | | | 3(12) | | | 1(4) | | | | 40 |

**ಸೂಚನೆ :–** 1.ವ= ವಸ್ತುನಿಷ್ಟ ಪ್ರಶ್ನೆ, ಕಿ= ಕಿರುಉತ್ತರ ಪ್ರಶ್ನೆ, ದೀ= ದೀರ್ಘ ಉತ್ತರ ಪ್ರಶ್ನೆ 2.ಪ್ರಶ್ನೆ(ಅಂಕ)

**ತರಗತಿ:6** **ಪ್ರಶ್ನಾವಾರು ವಿಶ್ಲೇಷಣೆ** **ವಿಷಯ :ಕನ್ನಡ**

| ಪ್ರಶ್ನೆ ಸಂ. | ಘಟಕ | ಉದ್ದಿಷ್ಠ | ನಿರ್ದಿಷ್ಠ | ಅಂಕ | ಪ್ರಶ್ನೆಯ ರೂಪ | ಕ್ಲಿಷ್ಟತೆ | ಸಮಯ |
|---|---|---|---|---|---|---|---|
| 1 | ಬೇಸಿಗೆ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 2 | ನೀ ಹೋದ ಮರುದಿನ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 3 | ಮಂಗಳ ಗ್ರಹದಲ್ಲಿ ಪುಟ್ಟಿ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 4 | ವ್ಯಾಕರಣ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 5 | ದೊಡ್ಡವರ ದಾರಿ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 6 | ಗಂಧರ್ವ ಸೇನ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 7 | ವ್ಯಾಕರಣ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 8 | ವ್ಯಾಕರಣ | ಗ್ರಹಿಕೆ | ಸ್ವಂತ ವಾಕ್ಯ ರಚಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 9 | ವ್ಯಾಕರಣ | ಜ್ಞಾನ | ಗುರುತಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 10 | ವ್ಯಾಕರಣ | ಜ್ಞಾನ | ಬರೆಯುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 11 | ವ್ಯಾಕರಣ | ಗ್ರಹಿಕೆ | ಬರೆಯುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 12 | ವ್ಯಾಕರಣ | ಜ್ಞಾನ | ಗುರುತಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 13 | ಕೃಷ್ಣ–ಸುಧಾಮ | ಗ್ರಹಿಕೆ | ಸಂಗ್ರಹಿಸಿ ಬರೆಯುತ್ತಾನೆ | 2 | ಕಿರುಉತ್ತರ | ಸಾಧಾರಣ | 6 |
| 14 | ಗಂಧರ್ವ ಸೇನ | ಗ್ರಹಿಕೆ | ಸಂಗ್ರಹಿಸಿ ಬರೆಯುತ್ತಾನೆ | 2 | ಕಿರುಉತ್ತರ | ಸಾಧಾರಣ | 6 |
| 15 | ಮಂಗಳ ಗ್ರಹದಲ್ಲಿ ಪುಟ್ಟಿ | ಗ್ರಹಿಕೆ | ಬರೆಯುತ್ತಾನೆ | 2 | ಕಿರುಉತ್ತರ | ಸಾಧಾರಣ | 4 |
| 16 | ಡಾ ರಾಜಕುಮಾರ್ | ಅಭಿವ್ಯಕ್ತಿ | ಬರೆಯುತ್ತಾನೆ | 2 | ಕಿರುಉತ್ತರ | ಸಾಧಾರಣ | 4 |
| 17 | ಕಂಬಳಿಹುಳು ಮತ್ತು ಚಿಟ್ಟೆ | ಅಭಿವ್ಯಕ್ತಿ | ವಿವರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 4 |
| 18 | ಡಾ ರಾಜಕುಮಾರ್ | ಗ್ರಹಿಕೆ | ಉದಾಹರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 4 |
| 19 | ಮಂಗಳ ಗ್ರಹದಲ್ಲಿ ಪುಟ್ಟಿ | ಅಭಿವ್ಯಕ್ತಿ | ವಿವರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 4 |
| 20 | ಗಂಧರ್ವ ಸೇನ | ಗ್ರಹಿಕೆ | ಗ್ರಹಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 4 |
| 21 | ದೊಡ್ಡವರ ದಾರಿ | ಅಭಿವ್ಯಕ್ತಿ | ವಿವರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 4 |
| 22 | ಬೇಸಿಗೆ | ಗ್ರಹಿಕೆ | ಬರೆಯುತ್ತಾನೆ | 2 | ಕಿರುಉತ್ತರ | ಸಾಧಾರಣ | 6 |
| 23 | ಕೃಷ್ಣ–ಸುಧಾಮ | ಪ್ರಶಂಸೆ | ಮೆಚ್ಚುವನು | 4 | ದೀರ್ಘಉತ್ತರ | ಕಠಿಣ | 10 |
| 24 | ಪತ್ರಲೇಖನ | ಅಭಿವ್ಯಕ್ತಿ | ಪತ್ರ ಬರೆಯುತ್ತಾನೆ | 4 | ದೀರ್ಘಉತ್ತರ | ಕಠಿಣ | 10 |
| | | | | | | | |

# 6ನೇ ತರಗತಿ ಕನ್ನಡ ಮಾದರಿ ಉತ್ತರ ಪತ್ರಿಕೆ

**I. ಒಂದು ಪದ/ ವಾಕ್ಯದಲ್ಲಿ ಉತ್ತರಿಸಿ:–** 3×1=3

1) ಭೂಮಿಯ ಪೋಷಕ ಸೂರ್ಯ
2) ತಾಳಿ ತಾಳಿ ಒಮ್ಮೆ ಚೇಳಾಗಿ ಕುಟುಕುವನು.
3) ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಮಂಗಳ ಗ್ರಹ ಸೇರಿದಳು.

**II. ಸರಿಯಾದ ಪದಗಳಿಂದ ಬಿಟ್ಟ ಸ್ಥಳ ತುಂಬಿರಿ :–** 3×1=3

4) 49
5) ಕಾಸು
6) ಮಂದ

**III. ಆವರಣದಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.** 6×1=6

7) ಮಕ್ಕಳು
8) ಮನೆಗೆ ಅಥಿತಿಗಳು ಬಂದಾಗ ಅವರನ್ನು ಸತ್ಕರಿಸುವುದು ನಮ್ಮ ಸಂಸ್ಕೃತಿ.
9) ದೊಡ್ಡದೊಡ್ಡ
10) ಭೂಮಿ
11) ಕುಡಿಕೆ ಹೊನ್ನು ಸಾಲದು
12) ಹೋಗುತ್ತಾಳೆ

**IV. ಸಂದರ್ಭ ಸಹಿತ ವಿವರಿಸಿರಿ.** 2×2=4

13) ಈ ಮೇಲಿನ ವಾಕ್ಯವನ್ನು **ವಿ ಎಸ್ ಶಿರಹಟ್ಟಿ ಮಠರು** ಬರೆದಿರುವ **ಕೃಷ್ಣ ಸುಧಾಮ** ಗದ್ಯ ಪಾಠದಿಂದ ಆರಿಸಲಾಗಿದೆ.
ಈ ಮೇಲಿನ ಮಾತನ್ನು ಕೃಷ್ಣನು ಸುಧಾಮನಿಗೆ ಹೇಳಿದ ಮಾತಾಗಿದೆ
ಸುಧಾಮನು ತಂದ ಅವಲಕ್ಕಿಯನ್ನು ಕೃಷ್ಣನು ತಾನು ತಿಂದು ತನ್ನ ಹೆಂಡತಿಗೆ ತಿನ್ನಿಸುತ್ತಾನೆ. ಇದನ್ನು ಕಂಡ ಸುಧಾಮ ಇಷ್ಟೊಂದು ಪ್ರೀತಿ ವಿಶ್ವಾಸವಿರುವ ಕೃಷ್ಣನ ಹತ್ತಿರ ನನ್ನ ಬಡತನ ಹೇಳಿ ಆತನ ಮನಸ್ಸಿಗೆ ಬೇಜಾರು ಮಾಡಬಾರದು ಎಂದು ಯೋಚಿಸುತ್ತಿರುವಾಗ ಕೃಷ್ಣನು ಮೇಲಿನಂತೆ ಹೇಳುತ್ತಾನೆ.

14) ಈ ಮೇಲಿನ ವಾಕ್ಯವನ್ನು **ಗಂಧರ್ವ ಸೇನಾ** ಪಾಠದಿಂದ ಆರಿಸಲಾಗಿದೆ.
ಈ ಮಾತನ್ನು ಮಂತ್ರಿಯೂ ಮಡಿವಾಳ್ತಿಯ ಮನೆಗೆ ಹೋಗಿ ಗಂಧರ್ವ ಸೇನಾ ಯಾರು ಎಂದು ವಿಚಾರಿಸಲು ಹೋದಾಗ ಮಡಿವಾಳ್ತಿಯು ಗಂಧರ್ವ ಸೇನಾ ನನ್ನ ಪ್ರೀತಿಯ ಕತ್ತೆ ನಿನ್ನೆ ರಾತ್ರಿ ಕಣ್ಣು ಮುಚ್ಕೊಂಡ್ಬಿಟ್ಟ ಎಂದು ಮಡಿವಾಳ್ತಿಯು ಹೇಳುತ್ತಾಳೆ.

**V. ಪದ್ಯವನ್ನು ಪೂರ್ತಿ ಮಾಡಿ :–** 1×2=2

15) ಆಗಸದಲ್ಲಿ ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ ? ಇದು ಕಷ್ಟ

**VI. ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ:–** 6×2=12

16) ರಾಜಕುಮಾರ್ ಶ್ರೇಷ್ಠ ನಟ , ಶ್ರೇಷ್ಠ ಗಾಯಕ , ಅಲ್ಲದೆ ಒಳ್ಳೆಯ ಹೃದಯವಂತ ಮನುಷ್ಯರಾಗಿದ್ದರು . ಕನ್ನಡಿಗರನ್ನು ಅಭಿಮಾನಿ ದೇವರೆಂದು ಕರೆಯುತ್ತಿದ್ದರು . ಇವರು ವಿನಯವಂತಿಕೆಗೆ ಸರಳತೆಗೆ ಹೆಸರುವಾಸಿಯಾಗಿದ್ದಾರೆ . ಎಲ್ಲರನ್ನೂ ಪ್ರೀತಿಸುತ್ತಿದ್ದರು. ಇವರ ಸಹೃದಯತೆಗೆ ಮನ ಸೋಲದವರೇ ಇರಲಿಲ್ಲ . ಇಂದಿಗೂ ಇವರು ಎಲ್ಲರ ಪ್ರೀತಿ ಪಾತ್ರರಾಗಿ , ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದ್ದಾರೆ .ಎಲ್ಲರೂ ಇವರನ್ನು ಇಷ್ಟಪಡುತ್ತಾರೆ .

17) ಕಂಬಳು ಹುಳುವಿನ ಮೈ ಕಪ್ಪಾಗಿರುತ್ತದೆ. ಅದರ ಮೇಲೆ ಮುಳ್ಳಿನಂತೆ ಬೆಳೆದ ರೋಮಗಳು ಬೆಳೆದಿರುತ್ತವೆ. ಎಣಿಸಲು ಆಗದಷ್ಟು ಕಾಲುಗಳು ಇರುತ್ತವೆ.

18) ರಾಜ್‌ಕುಮಾರ್ ಅಶಕ್ತ ಕಲಾವಿದರ ನೆರವಿಗಾಗಿ ಅನೇಕ ರಸಸಂಜೆ ಕಾರ್ಯಕ್ರಮಗಳನ್ನು ನಡೆಸಿ ನೆರವಿಗೆ ಬಂದಿದ್ದಾರೆ. ಬಡತನದಲ್ಲಿ ಬೆಳೆದು ಬಂದ ಅವರಿಗೆ ಹಸಿವಿನ, ಅನ್ನದ ಬೆಲೆ ಚೆನ್ನಾಗಿ ತಿಳಿದಿತ್ತು. ಲೆಕ್ಕವಿಲ್ಲದಷ್ಟು ಸಹ ಕಲಾವಿದರು, ತಂತ್ರಜ್ಞರು, ಚಲನಚಿತ್ರ ಕಾರ್ಮಿಕರು, ಸಂಘ ಸಂಸ್ಥೆಗಳು ರಾಜಕುಮಾರ್ ಅವರಿಂದ ಆರ್ಥಿಕ ನೆರವು ಪಡೆದ ಉದಾಹರಣೆಗಳಿವೆ. ರಾಜಕುಮಾರ್ ಅವರ ಕರುಣಾಮಯಿ ಹೃದಯ ಸಂಪನ್ನತೆಗೆ ಇವು ಕೆಲವು ಉದಾಹರಣೆಗಳು ಮಾತ್ರ.

19) ಮಂಗಳ ಗ್ರಹದ ಜನತೆಯು ನಾಡನ್ನು ಕಟ್ಟಲು ಮರಗಳನ್ನು ಕಡಿದರು ಆಗ ಮಳೆ ಬೆಳೆ ಕಾಣದೆ ಜೀವಿಯು ಅಳಿದು ಹೋಗಿ ಮಂಗಳ ಗ್ರಹಕ್ಕೆ ಬರ ಬಂದಿತು.

20) ರಾಣಿಯ ಸೇವಕಿಯು ನಮ್ಮ ಮಹಾರಾಜರಿಗೂ ಆ ಗಂಧರ್ವ ಸೇನರಿಗೂ ಏನು ಸಂಬಂಧ? ಎಂದು ಆಲೋಚನೆ ಮಾಡಿದಳು.

21) ರಾಜೇಂದ್ರ ಪ್ರಸಾದರು ರಾಷ್ಟ್ರಪತಿಗಳಾಗಿದ್ದರೂ ಹ ಸರಳ ಜೀವನ ನಡೆಸಿದವರು. ಅವರು ಕೋಪವನ್ನು ಹತ್ತಿಕ್ಕ ಬಲ್ಲವರಾಗಿದ್ದರು. ಬಾಳಿನಲ್ಲಿ ಶಿಸ್ತು, ಸಂಯಮ, ಸಮಯ ಪಾಲನೆ ಇವುಗಳನ್ನು ಮೈಗೂಡಿಸಿಕೊಂಡಿದ್ದರು.

**VII. ಕೊಟ್ಟಿರುವ ಕವಿಯ ಕಾಲ,ಕೃತಿ,ಸ್ಥಳ,ಮತ್ತು ಪ್ರಶಸ್ತಿಗಳ ಬಗ್ಗೆ ಬರೆಯಿರಿ.** 1×2=2

22) **ಕವಿ:** ಬಿ.ಆರ್ ಲಕ್ಷಣರಾವ್

**ಸ್ಥಳ** : ಚೀಮಂಗಲ ಗ್ರಾಮ

**ಜನನ:** 9– 9– 1946

**ನಾಟಕಗಳು :** ನನಗ್ಯಾಕೋ ಡೌಟು, ಭಲೇ ಮಲ್ಲೇಶಿ

**ಕವನ ಸಂಕಲನಗಳು :** ಗೋಪಿ ಮತ್ತು ಗಾಂಡಲೀನ, ಟುವಟಾರ, ಇವಳು ನದಿಯಲ್ಲ, ಸುಬ್ಬಾಭಟ್ಟರ ಮಗಳೇ, ಭಾರತ ಬಿಂದು ರಶ್ಮಿ, ಹನಿಗವಿತೆಗಳು, ವಿನೋದ ಕವಿತೆಗಳು

**VIII. ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ:–** 2×4=8

23) ವಿದ್ಯಾರ್ಥಿಗಳು ಅವರು ಮೆಚ್ಚುವ ಗುಣಗಳನ್ನು ಬರೆಯುತ್ತಾರೆ.

24) ಪತ್ರ ಲೇಖನ